**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಕಡೂರು**

**ಸಿಸಿ. ನಂ. 52/2022**

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು :

1. ಮಹೇಶಪ್ಪ ಅಲಿಯಾಸ್ ಮಹೇಶ್ವರಪ್ಪ
   ಬಿನ್ ಗೋವಿಂದಪ್ಪ,
   ವಯಸ್ಸು ಸುಮಾರು 55 ವರ್ಷ,
   ವಾಸಃ ಜಿ. ಕಾರೇಹಳ್ಳಿ, ಕಡೂರು ತಾಲ್ಲೂಕು.
2. ಶ್ರೀನಿವಾಸ ಅಲಿಯಾಸ್ ಸೀನಪ್ಪ
   ಬಿನ್ ಗೋವಿಂದಪ್ಪ,
   ವಯಸ್ಸು ಸುಮಾರು 58 ವರ್ಷ,
   ವಾಸಃ ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
3. ರಾಜಪ್ಪ ಬಿನ್ ಗೋವಿಂದಪ್ಪ,
   ವಯಸ್ಸು ಸುಮಾರು 37 ವರ್ಷ,
   ವಾಸಃ ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
4. ಸುನಿಲ್ ಅಲಿಯಾಸ್ ಸುನಿ ಬಿನ್ ಸೀನಪ್ಪ,
   ವಯಸ್ಸು ಸುಮಾರು 30 ವರ್ಷ,
   ವಾಸಃ ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
5. ಚಂದ್ರಪ್ಪ ಬಿನ್ ವೆಂಕಟಪ್ಪ,
   ವಯಸ್ಸು ಸುಮಾರು 65 ವರ್ಷ,
   ವಾಸಃ ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
6. ಶ್ರೀಮತಿ ವೀಣಾ ಕೋಂ ರಾಜಪ್ಪ,
   ವಯಸ್ಸು ಸುಮಾರು 34 ವರ್ಷ,
   ವಾಸಃ ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
7. ಮಂಜು ಬಿನ್ ರಾಜಪ್ಪ,
   ವಯಸ್ಸು ಸುಮಾರು 22 ವರ್ಷ,
   ವಾಸಃ ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

# <u>ದೋಷಾರೋಪಣೆ</u>

ಶ್ರೀ. ಹೆಚ್.ಪಿ ಮೋಹನ್‌ಕುಮಾರ್ ಬಿ.ಎಸ್ಸಿ, ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೇಯದಾಗಿ, ದಿನಾಂಕ 21.01.2020 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಕಡೂರು ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಜಿ. ಕಾರೇಹಳ್ಳಿ ಗ್ರಾಮದ ಚಾಸಾ.1 ರವರು ತಮ್ಮ ಮನೆಯಲ್ಲಿ ಕುಳಿತಿರುವಾಗ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು, ಸದರಿ ಕೂಟದ ಸದಸ್ಯರಾಗಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 143** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು, ಕೈಯಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಬಂದಿದ್ದರಿಂದ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 144** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ.1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ, ದೊಣ್ಣೆಯಿಂದ ಚಾಸಾ.1 ರವರ ಬಲಗೈಗೆ ಹೊಡೆದು ಸಾಮಾನ್ಯ ಸ್ವರೂಪದ ಸ್ವ-ಇಚ್ಛಾ ಗಾಯವನ್ನುಂಟುಮಾಡಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ.1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ, ಚಾಸಾ.1 ರವರ ಶಾಂತಿಭಂಗಕ್ಕೆ ಪ್ರೇರೇಪಣೆ ಮಾಡುವ ರೀತಿಯಲ್ಲಿ ಸೂಳೆ ಮಗನೆ, ಬೋಳಿ ಮಗನೇ, ನೀನು ಯಾಕೆ ಹೊಡೆಯುವುದು ಎಂದು ಅವಾಚ್ಯವಾಗಿ ಬೈದು ನಿಂದಿಸಿರುವ ಕಾರಣ, ಆರೋಪಿತರಾದ ನೀವು, **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಐದನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಚಾಸಾ.1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ,

ಚಾಸಾ.1 ರವರಿಗೆ ನೀನು ಯಾಕೆ ಹೊಡೆಯುವುದು ಎಂದು ಕೈಯಿಂದ ಹೊಡೆದು, ನಂತರ ಜಗಳ ಬಿಡಿಸಲು ಬಂದ ಚಾಸಾ.1 ರವರ ತಾಯಿ ಚಾಸಾ.6 ರವರು ಹಾಗೂ ಚಾಸಾ.1 ರವರ ಮಗಳು ಚಾಸಾ.7 ರವರಿಗೆ ಆರೋಪಿತರಾದ ನೀವುಗಳು ಕೈಯಿಂದ ಹೊಡೆದು, ದೂಡಿ ಸಾಮಾನ್ಯ ಸ್ವರೂಪದ ಸ್ವ-ಇಚ್ಛಾ ಗಾಯವನ್ನುಂಟುಮಾಡಿರುವ ಕಾರಣ, ಆರೋಪಿತರಾದ ನೀವು, **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ.1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ, ನಮ್ಮ ಅಣ್ಣನಿಗೆ ತೊಂದರೆ ಕೊಟ್ಟರೆ ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುವ ಕಾರಣ, ಆರೋಪಿತರಾದ ನೀವು, **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ 06.10.2022

**(ಹೆಚ್.ಪಿ ಮೋಹನ್‌ಕುಮಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು**

**ಸಿಸಿ . ನಂ. 52/2022**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 1 ನೇ ಆರೋಪಿಯ ಹೆಸರು | ಃ | ಮಹೇಶಪ್ಪ |
| ತಂದೆಯ ಹೆಸರು | ಃ | ಗೋವಿಂದಪ್ಪ |
| ವಯಸ್ಸು | ಃ | 57 ವರ್ಷ, |
| ಉದ್ಯೋಗ | ಃ | ಚಾಲಕ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**ದೋಷಾರೋಪಣೆ**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

1 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>**
**<u>ಕಡೂರು</u>**

**<u>ಸಿಸಿ . ನಂ. 52/2022</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 2 ನೇ ಆರೋಪಿಯ ಹೆಸರು | ಃ | ಶ್ರೀನಿವಾಸ |
| ತಂದೆಯ ಹೆಸರು | ಃ | ಗೋವಿಂದಪ್ಪ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

2 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು</u>**

**<u>ಸಿಸಿ . ನಂ. 52/2022</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 3 ನೇ ಆರೋಪಿಯ ಹೆಸರು | ಃ | ರಾಜು |
| ತಂದೆಯ ಹೆಸರು | ಃ | ಗೋವಿಂದಪ್ಪ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

3 ನೇ ಆರೋಪಿಯ ಸಹಿಃ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು**

**ಸಿಸಿ . ನಂ. 52/2022**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 4 ನೇ ಆರೋಪಿಯ ಹೆಸರು | ಃ | ಸುನೀಲ್ ಕೆ.ಎಸ್. |
| ತಂದೆಯ ಹೆಸರು | ಃ | ಸೀನಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**ದೋಷಾರೋಪಣೆ**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

4 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು</u>**

**<u>ಸಿಸಿ . ನಂ. 52/2022</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 5 ನೇ ಆರೋಪಿಯ ಹೆಸರು | ಃ | ಚಂದ್ರಪ್ಪ |
| ತಂದೆಯ ಹೆಸರು | ಃ | ವೆಂಕಟಪ್ಪ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

5 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು</u>**

**<u>ಸಿಸಿ . ನಂ. 52/2022</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 6 ನೇ ಆರೋಪಿಯ ಹೆಸರು | ಃ | ಶ್ರೀಮತಿ ವೀಣಾ |
| ಗಂಡನ  ಹೆಸರು | ಃ | ರಾಜಪ್ಪ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

6 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು</u>**

**<u>ಸಿಸಿ . ನಂ. 52/2022</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 7 ನೇ ಆರೋಪಿಯ ಹೆಸರು | ಃ | ಮಂಜು |
| ತಂದೆಯ ಹೆಸರು | ಃ | ರಾಜಪ್ಪ |
| ವಯಸ್ಸು | ಃ | 20 ವರ್ಷ |
| ಉದ್ಯೋಗ | ಃ | ಕಾರ್ಮಿಕ |
| ವಾಸಃ | ಃ | ಜಿ. ಕಾರೇಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?

ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರ :

ದಿನಾಂಕಃ06.10.2022 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

7 ನೇ ಆರೋಪಿಯ ಸಹಿಃ